**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ:- 2017-18ನೇ ಸಾಲಿಗೆ ಶ್ರೀ.ನಿಸರ್ಗ ವಿದ್ಯಾವರ್ಧಕ ಸೇವಾ ಟ್ರಸ್ಟ್‌ನ ವತಿಯಿಂದ ನಡೆಸಲ್ಪಡುತ್ತಿರುವ 'ಸಾರಂಗ್ ಇನ್‌ಸ್ಟಿಟ್ಯೂಟ್ ಆಫ್ ಪಾಲಿಟೆಕ್ನಿಕ್'-ಎಂಬ ಖಾಸಗಿ ಪಾಲಿಟೆಕ್ನಿಕ್ ಅನ್ನು ಪ್ರಾರಂಭಿಸಲು ಸರ್ಕಾರದ ಅನುಮತಿ ನೀಡುವ ಬಗ್ಗೆ-

------

**ಓ ದ ಲಾ ಗಿ ದೆ:-**

01. Member Secretary, All Indian council for Technical Education ಇವರ ಪತ್ರ ಸಂ: South-West/2017/1-3399869947, Dated:30-04-2017.
02. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಡಿಟಿಇ 11 ಡಿವಿಪಿ (2) 2017, ದಿ:06-06-2017.

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮಸಂಖ್ಯೆ (1)ರ ಪತ್ರದಲ್ಲಿ Member Secretary, All Indian council for Technical Education ಇವರು ಶ್ರೀ ನಿಸರ್ಗ ವಿದ್ಯಾವರ್ಧಕ ಸೇವಾ ಟ್ರಸ್ಟ್‌ನ ವತಿಯಿಂದ 2017-18ನೇ ಶೈಕ್ಷಣಿಕ ಸಾಲಿನಿಂದ 'ಸಾರಂಗ್ ಇನ್‌ಸ್ಟಿಟ್ಯೂಟ್ ಆಫ್ ಪಾಲಿಟೆಕ್ನಿಕ್, ಎಂಬ ಖಾಸಗಿ ಪಾಲಿಟೆಕ್ನಿಕ್‌ನ್ನು ತುಮಕೂರು ಜಿಲ್ಲೆಯ ಗೂಳೂರಿನಲ್ಲಿ ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಿ ಈ ಕೆಳಕಂಡ ಡಿಪ್ಲೋಮೊ ಕೋರ್ಸುಗಳು ಮತ್ತು ಪ್ರವೇಶ ಸಂಖ್ಯೆಯೊಂದಿಗೆ ಪ್ರಾರಂಭಿಸಲು ಅನುಮತಿ ನೀಡಿರುತ್ತಾರೆ.

| ಖಾಸಗಿ ಪಾಲಿಟೆಕ್ನಿಕ್‌ನ ಹೆಸರು ಮತ್ತು ವಿಳಾಸ | ಕೋರ್ಸು ವಿವರ | ವಿದ್ಯಾರ್ಥಿ ಪ್ರಮಾಣ (ಇನ್‌ಟೇಕ್) 2017-18 |
|---|---|---|
| ಸಾರಂಗ್ ಇನ್‌ಸ್ಟಿಟ್ಯೂಟ್ ಆಫ್ ಪಾಲಿಟೆಕ್ನಿಕ್, ಐಓಸಿಎಲ್ ಬಂಕ್ ಎದುರು, ಕುಣಿಗಲ್ ರೋಡ್, ಗೂಳೂರು-572118, ತುಮಕೂರು ಜಿಲ್ಲೆ. | 1. ಮೆಕ್ಯಾನಿಕಲ್ ಇಂಜಿ. | 120 |
| | 2. ಸಿವಿಲ್ ಇಂಜಿನಿಯರಿಂಗ್ | 120 |
| | 3. ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ | 60 |

ಮೇಲೆ ಓದಲಾದ ಕ್ರಮಸಂಖ್ಯೆ (2)ರ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರ ಪತ್ರದಲ್ಲಿ ಶ್ರೀ ನಿಸರ್ಗ ವಿದ್ಯಾವರ್ಧಕ ಸೇವಾ ಟ್ರಸ್ಟ್‌ನ ವತಿಯಿಂದ 2017-18ನೇ ಶೈಕ್ಷಣಿಕ ಸಾಲಿನಿಂದ 'ಸಾರಂಗ್ ಇನ್‌ಸ್ಟಿಟ್ಯೂಟ್ ಆಫ್ ಪಾಲಿಟೆಕ್ನಿಕ್, ಎಂಬ ಖಾಸಗಿ ಪಾಲಿಟೆಕ್ನಿಕ್‌ನ್ನು ತುಮಕೂರು ಜಿಲ್ಲೆಯ ಗೂಳೂರಿನಲ್ಲಿ ಪ್ರಾರಂಭಿಸಲು ಎಐಸಿಟಿಇ, ನವದೆಹಲಿ ಇವರು ಅನುಮತಿ ನೀಡಿರುವ ಮೇರೆಗೆ ಸದರಿ ಆಡಳಿತ ಮಂಡಳಿಯು 2017-18ನೇ ಸಾಲಿನಿಂದ ಹೊಸ ಪಾಲಿಟೆಕ್ನಿಕ್‌ನ್ನು ಪ್ರಾರಂಭಿಸಲು

ಪುಟ 2ಕ್ಕೆ

ಕೋರಿದ ಹಿನ್ನೆಲೆಯಲ್ಲಿ, ಈ ಬಗ್ಗೆ ನಿರ್ದೇಶನಾಲಯದ ವತಿಯಿಂದ ಸ್ಥಳ ತನಿಖಾ ತಂಡವನ್ನು ರಚಿಸಿ, ಸ್ಥಳ ತನಿಖೆಯನ್ನು ಆಯೋಜಿಸಿ ವರದಿಯನ್ನು ಪಡೆದುಕೊಳ್ಳಲಾಗಿದ್ದು, ಸದರಿ ಸ್ಥಳ ತನಿಖಾ ವರದಿಯಲ್ಲಿ 2017-18ನೇ ಸಾಲಿನಿಂದ ಶ್ರೀ ನಿಸರ್ಗ ವಿದ್ಯಾವರ್ಧಕ ಸೇವಾ ಟ್ರಸ್ಟ್‌ನ ವತಿಯಿಂದ 'ಸಾರಂಗ್ ಇನ್‌ಸ್ಟಿಟ್ಯೂಟ್ ಆಫ್ ಪಾಲಿಟೆಕ್ನಿಕ್'ನ್ನು ಪ್ರಾರಂಭಿಸಲು ಸದರಿ ಸಂಸ್ಥೆಯು ಎಲ್ಲಾ ಮೂಲಭೂತ ಹಾಗೂ ಶೈಕ್ಷಣಿಕ ಸೌಲಭ್ಯಗಳನ್ನು ಎಐಸಿಟಿಇ ನಿಯಮಾವಳಿಯ ಪ್ರಕಾರ ಹೊಂದಿದ್ದು, ಪಾಲಿಟೆಕ್ನಿಕ್‌ನ್ನು ಪ್ರಾರಂಭಿಸಲು ಶಿಫಾರಸ್ಸು ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಶ್ರೀ ನಿಸರ್ಗ ವಿದ್ಯಾವರ್ಧಕ ಸೇವಾ ಟ್ರಸ್ಟ್‌ನ ವತಿಯಿಂದ 2017-18ನೇ ಶೈಕ್ಷಣಿಕ ಸಾಲಿನಿಂದ 'ಸಾರಂಗ್ ಇನ್‌ಸ್ಟಿಟ್ಯೂಟ್ ಆಫ್ ಪಾಲಿಟೆಕ್ನಿಕ್, ಎಂಬ ಖಾಸಗಿ ಪಾಲಿಟೆಕ್ನಿಕ್‌ನ್ನು ಎಐಸಿಟಿಇ ಯು ಅನುಮತಿ ನೀಡಿರುವ ಕೋರ್ಸುಗಳು ಮತ್ತು ಪ್ರವೇಶಾತಿ ಸಂಖ್ಯೆಯೊಂದಿಗೆ ಪ್ರಾರಂಭಿಸಲು ಅನುಮತಿ ನೀಡಬಹುದೆಂದು ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 71 ಟಿಪಿಇ 2017,**
**ಬೆಂಗಳೂರು, ದಿನಾಂಕ:15ನೇ ಜೂನ್ 2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು, ಶ್ರೀ ನಿಸರ್ಗ ವಿದ್ಯಾವರ್ಧಕ ಸೇವಾ ಟ್ರಸ್ಟ್‌ನ ವತಿಯಿಂದ' "ಸಾರಂಗ್ ಇನ್‌ಸ್ಟಿಟ್ಯೂಟ್ ಆಫ್ ಪಾಲಿಟೆಕ್ನಿಕ್"ಎಂಬ ಖಾಸಗಿ ಪಾಲಿಟೆಕ್ನಿಕ್‌ನ್ನು ತುಮಕೂರು ಜಿಲ್ಲೆಯ ಗೂಳೂರಿನಲ್ಲಿ 2017-18ನೇ ಶೈಕ್ಷಣಿಕ ಸಾಲಿನಿಂದ ಈ ಕೆಳಕಂಡ ಹೆಸರು, ವಿಳಾಸ, ಕೋರ್ಸು ಮತ್ತು ವಿದ್ಯಾರ್ಥಿಗಳ ಪ್ರಮಾಣದೊಂದಿಗೆ ಹಾಗೂ ಈ ಕೆಳಕಂಡ ಷರತ್ತು ಹಾಗೂ ನಿಬಂಧನೆಗಳಿಗೊಳಪಟ್ಟು ಪ್ರಾರಂಭಿಸಲು ಅನುಮೋದನೆ ನೀಡಿ ಆದೇಶಿಸಿದೆ.

| ಖಾಸಗಿ ಪಾಲಿಟೆಕ್ನಿಕ್‌ನ ಹೆಸರು ಮತ್ತು ವಿಳಾಸ | ಕೋರ್ಸಿನ ವಿವರ | ವಿದ್ಯಾರ್ಥಿ ಪ್ರಮಾಣ(ಇನ್‌ಟೇಕ್) 2017-18 |
|---|---|---|
| 'ಸಾರಂಗ್ ಇನ್‌ಸ್ಟಿಟ್ಯೂಟ್ ಆಫ್ ಪಾಲಿಟೆಕ್ನಿಕ್, ಐಓಸಿಎಲ್ ಬಂಕ್ ಮುಂಭಾಗ, ಕುಣಿಗಲ್ ರೋಡ್, ಗೂಳೂರು-572118, ತುಮಕೂರು ಜಿಲ್ಲೆ. | 1. ಮೆಕ್ಯಾನಿಕಲ್ ಇಂಜಿನಿಯರಿಂಗ್ | 120 |
| | 2. ಸಿವಿಲ್ ಇಂಜಿನಿಯರಿಂಗ್ | 120 |
| | 3. ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ | 60 |

**ಷರತ್ತು ಮತ್ತು ನಿಬಂಧನೆಗಳು**

1) ಸದರಿ ಪಾಲಿಟೆಕ್ನಿಕ್‌ನ್ನು ಪ್ರಾರಂಭಿಸಲು ಸರ್ಕಾರದಿಂದ ಯಾವುದೇ ಜಮೀನನ್ನು ಒದಗಿಸುವುದಿಲ್ಲ.
2) ಸದರಿ ಪಾಲಿಟೆಕ್ನಿಕ್‌ನ್ನು ನಡೆಸಲು ಸರ್ಕಾರದಿಂದ ಯಾವುದೇ ಅನುದಾನವನ್ನು ಒದಗಿಸುವುದಿಲ್ಲ.
3) ಸದರಿ ಪಾಲಿಟೆಕ್ನಿಕ್‌ಗೆ ಪ್ರವೇಶಾತಿಗೆ ಸಂಬಂದಿಸಿದಂತೆ, ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ನು ಮತ್ತು ಸೂಚನೆಗಳನ್ನು ಪಾಲಿಸುವುದು.

ಪುಟ 3ಕ್ಕೆ

4) ಸದರಿ ಪಾಲಿಟೆಕ್ನಿಕ್‌ನ ಮಂಜೂರಾತಿ ಪತ್ರದಲ್ಲಿ All Indian council for Technical Education ಇವರು ವಿಧಿಸಿರುವ ಷರತ್ತುಗಳು ಮತ್ತು ನಿಬಂಧನೆಗಳನ್ನು ಯಥಾವತ್ತಾಗಿ ಪಾಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ.
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಗೆ:

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
2. ಅಧ್ಯಕ್ಷರು / ಕಾರ್ಯದರ್ಶಿಗಳು, ಶ್ರೀ ನಿಸರ್ಗ ವಿದ್ಯಾವರ್ಧಕ ಸೇವಾ ಟ್ರಸ್ಟ್, 3ನೇ ಕ್ರಾಸ್, ಡಾ.ಕಾರಂತ್ ರೋಡ್, ಸರಸ್ವತಿಪುರಂ, ಮರಳೂರು, ತುಮಕೂರು ಜಿಲ್ಲೆ. (ತಾಂತ್ರಿಕ ಶಿಕ್ಷಣ ನಿರ್ದೇಶಕರ ಮುಖಾಂತರ)
3. ಪ್ರಾಂಶುಪಾಲರು, ಸಾರಂಗ್ ಇನ್‌ಸ್ಟಿಟ್ಯೂಟ್ ಆಫ್ ಪಾಲಿಟೆಕ್ನಿಕ್, ಐಓಸಿಎಲ್ ಬಂಕ್ ಮುಂಭಾಗ, ಕುಣಿಗಲ್ ರೋಡ್, ಗೂಳೂರು-572 118, ತುಮಕೂರು ಜಿಲ್ಲೆ.(ತಾಂತ್ರಿಕ ಶಿಕ್ಷಣ ನಿರ್ದೇಶಕರ ಮುಖಾಂತರ)
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ (ಉನ್ನತ ಶಿಕ್ಷಣ) ಶಿಕ್ಷಣ ಇಲಾಖೆ ಅವರ ಆಪ್ತ ಕಾರ್ಯದರ್ಶಿಗಳು
5. ಸರ್ಕಾರದ ಉಪ ಕಾರ್ಯದರ್ಶಿ, ತಾಂತ್ರಿಕ ಮತ್ತು ಕಾಲೇಜು ಶಿಕ್ಷಣ ಇಲಾಖೆ
6. ಶಾಖಾ ರಕ್ಷ ಕಡತ/ ಹೆಚ್ಚುವರಿ ಪ್ರತಿಗಳು / ಓಡಿಜಿಸಿ

....4....

ಹಿಂಬರಹ ಸಂಖ್ಯೆ: ಡಿಟಿಇ 11 ಡಿವಿಪಿ(2) 2017 ದಿನಾಂಕ: 15/06/2017.

ಸರ್ಕಾರದ ಆದೇಶದ ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಂಬಂಧಪಟ್ಟ ಈ ಕೆಳಕಂಡ ಅಧಿಕಾರಿಗಳಿಗೆ ಹಾಗೂ ವಿಭಾಗಗಳಿಗೆ ಕಳುಹಿಸಲಾಗಿದೆ.

01. ಅಧ್ಯಕ್ಷರು / ಕಾರ್ಯದರ್ಶಿಗಳು, ಶ್ರೀ ನಿಸರ್ಗ ವಿದ್ಯಾವರ್ಧಕ ಸೇವಾ ಟ್ರಸ್ಟ್, 1ನೇ ಕ್ರಾಸ್, ಡಾ: ಕಾರಂತ್ ರೋಡ್, ಸರಸ್ವತಿಪುರಂ, ಮರಳೂರು, ತುಮಕೂರು ಜಿಲ್ಲೆ.
02. ಪ್ರಿನ್ಸಿಪಾಲರು, ಕಾರಂಗ್ ಇನ್‌ಸ್ಟಿಟ್ಯೂಟ್ ಆಫ್ ಪಾಲಿಟೆಕ್ನಿಕ್, ಹೆಚ್‌ಪಿಸಿಎಲ್ ಬಂಕ್ ಮುಂಭಾಗ, ಕುಣಿಗಲ್ ರೋಡ್, ಗೂಳೂರು-572118, ತುಮಕೂರು ಜಿಲ್ಲೆ.
03. ಜಂಟಿ ನಿರ್ದೇಶಕರು [ಆಡಳಿತ/ಪರೀಕ್ಷೆ/ತನಿಖೆ/ಎಟಿಎಸ್]
04. ಉಪ ನಿರ್ದೇಶಕರು [ಯೋಜನೆ/ಪರೀಕ್ಷೆ/ತನಿಖೆ]
05. ಸಹಾಯಕ ನಿರ್ದೇಶಕರು [ಯೋಜನೆ/ಪರೀಕ್ಷೆ/ತನಿಖೆ/ಎಂಪಿಸಿ]
06. ಸಂಖ್ಯಾಧಿಕಾರಿಗಳಿಗೆ
07. ಆಡಳಿತಾಧಿಕಾರಿಗಳಿಗೆ
08. ರಿಜಿಸ್ಟ್ರಾರ್ (ಪರೀಕ್ಷೆ/ಎಸಿಎಂ)
09. ಅಧೀಕ್ಷಕರು, ಎಸಿಎಂ ವಿಭಾಗ
10. ಕಾರ್ಯನಿರ್ವಾಹಕರು, ಎಸಿಎಂ(2) ವಿಭಾಗ
11. ಸರ್ಕಾರಿ ಆದೇಶಗಳ ಕಡತಕ್ಕೆ
12. ಈ ಗೌರ್‌ನೆನ್ಸ್ ಸೆಲ್‌ಗೆ
13. ಸಿಸ್ಟಂ ಅನಾಲಿಸ್ಟ್, ತಾ.ಶಿ.ನಿ.
14. ಪರೀಕ್ಷಾ ವಿಭಾಗದ ಎ.ಎಫ್.ಎಸ್./ಇ.ಎ.ಪಿ./ಆರ್.ಡಿ.ಎಂ.

ಜಂಟಿ ನಿರ್ದೇಶಕರು (ಎಟಿಎಸ್)

15/6/2017